**ದಿನಾಂಕಃ 09.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಆರ್ ಡಿ ಕೆ ವಕೀಲರಿಂದಃ-**

1. ಪ್ರಸ್ತುತ ದಾವೆಯ ವಾದಿ ಉಪವಿಭಾಗಾಧಿಕಾರಿ ಮುಂದೆ ದಾಖಲಾಗಿದ್ದ ಆರ್ ಎ 23/2016-17 ರಲ್ಲಿ 4 ನೇ ಎದುರುದಾರರು ಎಂದರೆ ಸರಿ. ಈ ದಾವೆಯ ವಾದಿ ಮತ್ತು ಸದರಿ ಅಪೀಲಿನಲ್ಲಿ 4 ನೇ ಎದುರುದಾರರ ವಿಳಾಸಗಳನ್ನು ಬೇರೆ ಬೇರೆ ನೀಡಿ ಉದ್ದೇಶ ಪೂರ್ವಕವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ಆರ್ ಎ 23/2016-174 ರ ಅಪೀಲಿನಲ್ಲಿ 4 ನೇ ಎದರುದಾರರ ವಿಳಾಸವನ್ನು ತಪ್ಪಾಗಿ ನೀಡಿದ್ದರಿಂದ ಸದರಿಯವರಿಗೆ ಯಾವುದೇ ನೋಟೀಸ್ ಜಾರಿಯಾಗಿಲ್ಲ ಎಂದರೆ ಸಾಕ್ಷಿಯು ಸರಿಯಾದ ವಿಳಾಸವನ್ನೆ ಕೊಟ್ಟಿದ್ದೇ ಎನ್ನುತ್ತಾರೆ. 4 ನೇ ಎದರುದಾರರಿಗೆನೋಟೀಸ್ ಜಾರಿ ಆಗದೆ ಇದ್ದುದ್ದರಿಂದ ದಿ 10.04.2017 ರಲ್ಲಿ Times of Karnataka daily news paper ನಲ್ಲಿ ನೋಟೀಸ್ ಜಾರಿ ಮಾಡಿದ್ದು ಸದರಿ ನೋಟೀಸ್ ನಲ್ಲಿ ತಪ್ಪು ವಿಳಾಸ ಇದ್ದುದ್ದರಿಂದ 4 ನೇ ಎದುರುದಾರರ ಗಮನಕ್ಕೆ ನೋಟೀಸ್ ಜಾರಿ ಆಗಿರುವುದು ಗಮನಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

2. ಎಸಿ ರವರ ನ್ಯಾಯಾಲಯದಿಂದ ತಾಲ್ಲೂಕು ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ಕೇಸು ರಿಮ್ಯಾಂಡ್ ಆಗಿದ್ದರಿಂದ 4 ನೇ ಎದುರುದಾರರ ವಿಳಾಸ ತಪ್ಪು ಇದ್ದುದ್ದರಿಂದ ತಾಲ್ಲೂಕು ದಂಡಾಧಿಕಾರಿಗಳಿಂದ ನೀಡಿದ್ದ ನೋಟೀಸ್ 4 ನೇ ಎದುರುದಾರರಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ನಿಪಿ-8 ಕ್ರಯಪತ್ರದಲ್ಲಿ ನಮೂದು ಮಾಡಿರುವ ವಿಳಾಸದಲ್ಲಿ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರುಗಳು ಬೆಂಗಳೂರಿನಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಎಸಿ ಯವರ ನಿರ್ದೇಶನದಂತೆ ತಾಲ್ಲೂಕು ದಂಡಾಧಿಕಾರಿಗಳ ನ್ಯಾಯಾಲಯಕ್ಕೆ ಕೇಸು ವರ್ಗಾವಣೆಗೊಂಡು ತಾಲ್ಲೂಕು ದಂಡಾಧಿಕಾರಿ ಮಾಡಿದ ಆದೇಶ ವಾದಿಗೆ ಗೊತ್ತಾಗಿ ಸದರಿ ತಹಶೀಲ್ದಾರ್ ರವರು ನೀಡಿದ

ಆದೇಶವನ್ನು ಉಪವಿಭಾಗಾಧಿಕಾರಿ, ರಾಮನಗರ ರವರ ಆರ್ ಎ 940/2019-20 ರಂತೆ ಅಪೀಲು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ-11 ರ ಆದೇಶದಂತೆ ನನ್ನ ಮತ್ತು ವಾದಿಯರ ನಡುವೆ ಇರುವ ವಿವಾದ ಸಿವಿಲ್ ಸ್ವರೂಪ ಇದ್ದು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಆರ್ ಎ 940/2019-20 ರಲ್ಲಿ ಆದೇಶ ಆಗಿದೆ ಎಂದರೆ ಸರಿ. ವಾದಿಯ ವಿಳಾಸ ಗೊತ್ತಿದ್ದರು ಅದನ್ನು ಮರೆಮಾಚಿ ಸುಳ್ಳು ವಿಳಾಸ ನೀಡಿ ದಾವಾ ಆಸ್ತಿಯನ್ನು ಲಪಟಾಯಿಸುವ ಸಂಚು ಮಾಡಿದ್ದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ